Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್, ಬೆಂಗಳೂರು-86,

## ದಿನಾಂಕ:-05-11-2022 ರಂದು ನಡೆದ ವಾರ್ಡ್ ಸಂಖ್ಯೆ:67ರ ಹಾಗು ಹೊಸ ವಾರ್ಡ್ ಸಂಖ್ಯೆ:51ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯೆ:ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್/53/2022-23 ದಿನಾಂಕ:02-11-2022

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ಕೇಶವ ಮೂರ್ತಿ | ಸಹಾಯಕ ನಿರ್ದೇಶಕರು ನಗರ ಯೋಜನೆ, ಬಿ.ಬಿ.ಎಂ.ಪಿ. |
| 2. | ಶ್ರೀ. ಬಿ. ಸಿ ರವಿಕುಮಾರ್ | ಸಹಾಯಕ ಅಭಿಯಂತರರು, ವಾರ್ಡ-67. |
| 3. | ಶ್ರೀ. ಉದಯಶಂಕರ್ | 1ನೇ ಆರ್ ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ಹಾಗು ವಾರ್ಡ್ ಸಮಿತಿ ಸದಸ್ಯರು. |
| 4. | ಶ್ರೀ.ರಂಗರಾಜು | ವಾರ್ಡ್ ನಾಗರೀಕರು. |
| 5. | ಶ್ರೀ. ಹೊನ್ನಪ್ಪ | ವಾರ್ಡ್ ಸಮಿತಿ ಸದಸ್ಯರು. |
| 6. | ಶ್ರೀ. ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು, ವಾರ್ಡ್-67. |
| 7. | ಶ್ರೀ. ಸಂತೋಶ್ | ಕಿರಿಯ ಆರೋಗ್ಯ ಪರೀವಿಕ್ಷಕರು, ವಾರ್ಡ್ -67. |
| 8. | ಶ್ರೀ. ಮನೋಹರ್ | ವಾರ್ಡ್ ಮಾರ್ಷಲ್, ವಾರ್ಡ್ -67. |
| 9. | ಶ್ರೀ. ಗಿರೀಶ್. ಬಿ | ಬೆಂ.ಜ.ಮಂ ಜಲ ಪರೀವಿಕ್ಷಕರು ಎನ್ ಡಬ್ಲೂ-1. |
| 10. | ಶ್ರೀ. ಶ್ರೀನಿವಾಸ್ ಎನ್ | ಬೆಂ.ಜ.ಮಂ ಜಲ ಪರೀವಿಕ್ಷಕರು ಎನ್ ಡಬ್ಲೂ-2. |
| 11. | ಶ್ರೀ. ಮುನಿಸ್ವಾಮಿ | ಸಹಾಯಕ ಪೋಲಿಸ್ ಇನ್ಸ್‌ಪೆಕ್ಟರ್. ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. |
| 12. | ಶ್ರೀ. ಮಂಜುನಾಥ್. | ತೋಟಗಾರಿಕೆ ಇಲಾಖೆ, ಮೇಸ್ತ್ರೀ. |
| 13. | ಶ್ರೀ. ಶ್ರೀನಿವಾಸ್ ಗೌಡ. | ಘ.ತ್ಯಾ.ನಿ ಗುತ್ತಿಗೆದಾರರು. |
| 14. | ಶ್ರೀ. ಮಂಜುನಾಥ್ | ಸಹಾಯಕ ಪೋಲಿಸ್ ಇನ್ಸ್‌ಪೆಕ್ಟರ್. ರಾಜಾಜಿನಗರ ಸಂಚಾರಿ ಪೊಲೀಸ್ ಠಾಣೆ. |
| 15. | ಶ್ರೀ. ರಾಜೇಶ್ | ಕಂದಾಯ ಪರೀವಿಕ್ಷಕರು. |
| 16. | ಶ್ರೀ. ಮಂಜುನಾಥ್ | ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು. |
| 17. | ಸಹಾಯಕ ಅಭಿಯಂತರರು, ಬೋರ್ವೆಲ್ ನಿರ್ವಹಣೆ. | ಗೈರು ಹಾಜರಿ. |

5/11/22

ಪು.ತಿ.ನೋ.



Scanned by CamScanner

| | | |
|---|---|---|
| 18. | ಮಹಾಲಕ್ಷ್ಮೀಪುರಂ ಪೋಲಿಸ್ ಠಾಣೆ. | ಗೈರು ಹಾಜರಿ. |
| 19. | ಸುಬ್ರಮಣ್ಯನಗರ ಪೋಲಿಸ್ ಠಾಣೆ. | ಗೈರು ಹಾಜರಿ. |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಸೆಪ್ಟೆಂಬರ್ ಮಾಹೆಯ ದಿ: 05/11/2022 ರಂದು ಬೆಳ್ಳಿಗೆ 9:30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## <u>ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:</u>

| | |
|---|---|
| ಶ್ರೀ. ಉದಯಶಂಕರ್ 1ನೇ ಆರ್ ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ಹಾಗು ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 1ನೇ 'ಆರ್' ಬ್ಲಾಕ್‌ನಲ್ಲಿ ಎರಡು ರಸ್ತೆಗಳಿಗೆ ರ್‍ಯಾಂಪ್ ಮಾಡಬೇಕು ಕಾರುಗಳು ಓಡಾಡಲು ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು, ವಾರ್ಡ್–67 | ವಾರ್ಡ್‌ನ ಸಮಿತಿ ಸದಸ್ಯರು ತಿಳಿಸಿರುವಂತೆ ವಾರ್ಡ್‌ನ ರಾಜಾಜಿನಗರ 1ನೇ 'ಆರ್' ಬ್ಲಾಕ್‌ನಲ್ಲಿ ರಸ್ತೆಗಳಿಗೆ ರ್‍ಯಾಂಪ್ ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ರಾಮನಾಥ್ ವಾರ್ಡ್ ನಾಗರೀಕರು. | ವಾರ್ಡ್‌ನ 7ನೇ ಅಡ್ಡರಸ್ತೆ ಆಟದ ಮೈದಾನದಲ್ಲಿ ಲೈಟ್ ಅಳವಡಿಸಬೇಕು ಮತ್ತು ವ್ಯಾಯಾಮ ಮಾಡುವ ಉಪಕರಣಗಳನ್ನು ಅಳವಡಿಸಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು, ವಾರ್ಡ್–67 | ವಾರ್ಡ್‌ನ ಸಮಿತಿ ಸದಸ್ಯರು ತಿಳಿಸಿರುವಂತೆ 7ನೇ ಅಡ್ಡರಸ್ತೆ ಆಟದ ಮೈದಾನದ ದೂರಿಗೆ ಸಂಭಂದಿಸಿದಂತೆ ಸಹಾಯಕ ಅಭಿಯಂತರರು (ಬೀದಿ ದೀಪ ನಿರ್ವಹಣೆ) ರವರು ಕ್ರಮವಹಿಸಲು ಸಭೆಯಲ್ಲಿ ತಿಳಿಸಿದರು. ಹಾಗು ಆಟದ ಮೈದಾನವು ಕಿರಿದಾಗಿರುವುದರಿಂದ ವ್ಯಾಯಾಮ ಮಾಡುವ ಉಪಕರಣಗಳನ್ನು ಅಳವಡಿಸಲು ಸ್ಥಳಾವಕಾಶವಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಉದಯಶಂಕರ್ 1ನೇ ಆರ್ ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ಹಾಗು ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಮಹಾಲಕ್ಷ್ಮೀಪುರಂ ಸಿಗ್ನಲ್ ಹತ್ತಿರ ಜಿಬ್ರಾ ಕ್ರಾಸಿಂಗ್ ಲೈನ್‌ಗಳನ್ನು ಅಳವಡಿಸಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಕೇಶವಮೂರ್ತಿ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಮಹಾಲಕ್ಷ್ಮೀಪುರಂ ಸಿಗ್ನಲ್ ಹತ್ತಿರ ಜಿಬ್ರಾ ಕ್ರಾಸಿಂಗ್ ಲೈನ್ ಮಾರ್ಕ್ ಮಾಡುವುದು ಟಿ.ಇ.ಸಿ ವಿಭಾಗದವರಿಗೆ ಬರುವುದರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು ಟಿ.ಇ.ಸಿ ವಿಭಾಗದವರಿಗೆ ದೂರವಾಣಿ ಮೂಲಕ ಕರೆ ಮಾಡಿ ಜಿಬ್ರಾ ಕ್ರಾಸಿಂಗ್ ಲೈನ್ ಮಾರ್ಕ್ ಮಾಡಲು ತಿಳಿಸಲಾಯಿತು ಹಾಗು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಟಿ.ಇ.ಸಿ ವಿಭಾಗದವರಿಗೆ ಪತ್ರ ಬರೆಯಲು ಸೂಚಿಸಲಾಯಿತು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು, ವಾರ್ಡ್–67 | ವಾರ್ಡ್‌ನ ನೋಡೆಲ್ ಅಧಿಕಾರಿಗಳು ಸೂಚಿಸುವಂತೆ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |



5/11/22 ಮು.ತಿ.ನೋ.

Scanned by CamScanner

| | |
|---|---|
| ಶ್ರೀ. ರಾಮನಾಥ್<br>ವಾರ್ಡ್ ನಾಗರೀಕರು. | ವಾರ್ಡ್‌ನ ರಾಜಾಜಿನಗರ 1ನೇ 'ಎನ್' ಬ್ಲಾಕ್‌ನ 7ನೇ ಅಡ್ಡರಸ್ತೆಯಿಂದ ಡಾ|| ರಾಜ್‌ಕುಮಾರ್ ರಸ್ತೆಗೆ ಹೋಗುವ ಕಡೆ ಒನ್ ವೆ ರಸ್ತೆಯಿದ್ದರು ಕೂಡ ವಾಹನ ಸವಾರರು ಎದುರು ಬರುತ್ತಿದ್ದಾರೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಕೇಶವಮೂರ್ತಿ<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆಯವರು ಸಭೆಯಲ್ಲಿ ಹಾಜರಿದ್ದು ದೂರಿನ ಬಗ್ಗೆ ಕ್ರಮವಹಿಸಲು ಸೂಚಿಸಿದರು. |
| ಶ್ರೀ. ಮಂಜುನಾಥ್<br>ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆಯ ಸಿಬ್ಬಂದಿ | ವಾರ್ಡ್‌ನ ನಾಗರೀಕರು ತಿಳಿಸಿರುವಂತೆ ರಾಜಾಜಿನಗರ 1ನೇ 'ಎನ್' ಬ್ಲಾಕ್‌ನ 7ನೇ ಅಡ್ಡರಸ್ತೆಯಿಂದ ಡಾ|| ರಾಜ್‌ಕುಮಾರ್ ರಸ್ತೆಗೆ ಹೋಗುವ ಕಡೆ ಒನ್ ವೆ ರಸ್ತೆಯಿದ್ದರು ಕೂಡ ವಾಹನ ಸವಾರರು ಎದುರು ಬರುತ್ತಿರವುದನ್ನು ಗಮನಿಸಿದ್ದು ಹಲವಾರು ಭಾರಿ ಒನ್ ವೆ ಅಲ್ಲಿ ಬರುವ ಸವಾರರಿಗೆ ದಂಡ ವಿಧಿಸಲಾಗಿದೆ ಹಾಗು ಇನ್ನು ಮುಂದೆ ಎಚ್ಚು ಗಸ್ತು ತಿರುಗಿ ಮುಂದಿನ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ರಾಮನಾಥ್<br>ವಾರ್ಡ್ ನಾಗರೀಕರು. | ವಾರ್ಡ್‌ನ ರಾಜಾಜಿನಗರ 1ನೇ 'ಎನ್' ಬ್ಲಾಕ್‌ನಲ್ಲಿ ಮಸ್ಕಿಟೋ ಸ್ಪ್ರೇ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್–67. | ಶ್ರೀ. ರಾಮನಾಥ್, ವಾರ್ಡ್‌ನ ನಾಗರೀಕರು ತಿಳಿಸಿರುವಂತೆ 1ನೇ 'ಎನ್' ಬ್ಲಾಕ್‌ನಲ್ಲಿ ಮಸ್ಕಿಟೋ ಸ್ಪ್ರೇ ಮಾಡಲಾಗುವುದಾಗಿ ಸಭೆಯಲ್ಲ ತಿಳಿಸಿದರು. |
| ಶ್ರೀ. ಉದಯಶಂಕರ್<br>1ನೇ ಆರ್ ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ಹಾಗು ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಮಹಾಲಕ್ಷ್ಮೀಲೇಔಟ್ ಬಸ್ ನಿಲ್ದಾಣಕ್ಕೆ ಶೀಟ್ ಇರುವುದಿಲ್ಲ ಮಳೆ ಬಂದರೆ ಬಸ್ ನಿಲ್ದಾಣದಲ್ಲಿ ನಿಲ್ಲಲು ಸದ್ಯವಾಗುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಕೇಶವಮೂರ್ತಿ<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿನಂತೆ ಸಂಭಂದಿಸಿದ ಅಧಿಕಾರಿಗಳಿಗೆ ಕ್ರಮವಹಿಸಲು ತಿಳಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಹೊನ್ನಪ್ಪ<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ನಾಗಪುರದ 11ನೇ 'ಬಿ' ಅಡ್ಡರಸ್ತೆ, 4ನೇ ಮುಖ್ಯರಸ್ತೆಯಲ್ಲಿ ಮ್ಯಾನ್‌ಹೋಲ್ ರೈಸ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಕೇಶವಮೂರ್ತಿ<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿನಂತೆ ಸಭೆಯಲ್ಲಿ ಹಾಜರಿದ್ದ ಬೆ.ಜ.ಮಂರವರು ಕ್ರಮವಹಿಸಲು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು, ವಾರ್ಡ–67 | ವಾರ್ಡ್‌ನ ಇಂದಿರಾ ಕ್ಯಾಂಟೀನ್ ಒಳಚರಂಡಿ ಪೈಪ್‌ನಲ್ಲಿ ಸರಾಗವಾಗಿ ನೀರು ಹೋಗುತ್ತಿರುವುದಿಲ್ಲ ಎಂದು ದೂರುಗಳು ಬರುತ್ತೀವೆ ಕೂಡಲೇ ಬೆ.ಜ.ಮಂರವರು ಕ್ರಮವಹಿಸಲು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಶ್ರೀನಿವಾಸ್ ಎನ್<br>ಬೆಂ.ಜ.ಮಂ ಜಲ ಪರೀವಿಕ್ಷಕರು ಎನ್ ಡಬ್ಲ್ಯೂ–2. | ವಾರ್ಡ್‌ನ ಇಂದಿರಾ ಕ್ಯಾಂಟೀನ್ ರವರು ಸುಮಾರು ವರ್ಷಗಳಿಂದ ನೀರಿನ ಶುಲ್ಕ ಪಾವತಿಸಿರುವುದಿಲ್ಲ ಆದ್ದರಿಂದ ನಮ್ಮ ಇಲಾಖಾವತಿಯಿಂದ ನೀರು ಹಾಗು ಒಳಚರಂಡಿ ಸಂಪರ್ಕವನ್ನು ಸ್ಥಗಿತಗೊಳಿಸಲಾಗಿರುವುದಾಗಿ ಸಭೆಯಲ್ಲಿ ಮಾಹಿತಿ ಒದಗಿಸಿದರು. |

5/11/22

ಪು.ತಿ.ನೋ.



Scanned by CamScanner

| | |
|---|---|
| ಶ್ರೀ. ಕೇಶವಮೂರ್ತಿ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಬೆಂ.ಜ.ಮಂ ಜಲ ಪರೀವಿಕ್ಷಕರು ಎಸ್ ಡಬ್ಲ್ಯೂ-2. ರವರು ತಿಳಿಸಿರುವಂತೆ ಕ್ಯಾಂಟೀನ್‌ರವರು ಸುಮಾರು ವರ್ಷಗಳಿಂದ ನೀರಿನ ಶುಲ್ಕ ಪಾವತಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ ಸಂಭಂದಪಟ್ಟ ವಿಭಾಗದವರು ಶುಲ್ಕ ಪಾವತಿಸಿ, ಎಂದಿನಂತೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಇಂದಿರಾ ಕ್ಯಾಂಟೀನ್ ನಿರ್ವಹಿಸಲು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಮಂಜುನಾಥ್ ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆಯ ಸಿಬ್ಬಂದಿ | ವಾರ್ಡ್‌ನ ಪಶ್ಚಿಮ ಕಾರ್ಡ್ ರಸ್ತೆಯ ಸರ್ವಿಸ್ ರಸ್ತೆಯಲ್ಲಿ ನೀರು ನಿಂತಿರುತ್ತದೆ ಇದರಿಂದ ವಾಹನ ಸವಾರರಿಗೆ ಹಾಗು ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು, ವಾರ್ಡ-67 | ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆಯ ಸಿಬ್ಬಂದಿರವರು ತಿಳಿಸಿರುವಂತೆ ಸ್ಥಳ ಪರೀಶಿಲಿಸಿ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು, ವಾರ್ಡ-67 | ವಾರ್ಡ್‌ನಲ್ಲಿ ಸಾರ್ವಜನಿಕರು ಮನೆಯ ಡೆಬ್ರೀಸ್‌ಅನ್ನು ರಸ್ತೆಯ ಮೇಲೆ ಹಾಕಿ ತೆರವುಗೊಳಿಸುತ್ತಿರುವುದಿಲ್ಲ, ಮಳೆಗಾಲ ಶುರುವಾಗುತ್ತಿರುವುದರಿಂದ ಡೆಬ್ರೀಸ್ ರಸ್ತೆಯ ಪಕ್ಕದಲ್ಲಿರುವ ಚರಂಡಿಗೆ ಹೋಗಿ ಸದರಿ ಚರಂಡಿ ಬ್ಲಾಕ್ ಆಗುವ ಸಧ್ಯತೆಯಿರುತ್ತದೆ ಇದರಿಂದ ಸಾರ್ವಜನಿಕರು ಡೆಬ್ರೀಸ್ ಹಾಕಿ ತೆರವುಗೊಳಿಸದ ಮನೆಯ ಮಾಲೀಕರಿಗೆ ಮಾರ್ಷಲ್ ದಂಡ ಹಾಕಲು ಸಭೆಯಲ್ಲಿ ಸೂಚಿಸಿದರು. |
| ಶ್ರೀ. ಮನೋಹರ್ ವಾರ್ಡ್ ಮಾರ್ಷಲ್, ವಾರ್ಡ್-67. | ವಾರ್ಡ್‌ನ ಸಹಾಯಕ ಅಭಿಯಂತರರು ಸೂಚಿಸಿರುವಂತೆ ಮನೆಯ ಮಾಲೀಕರಿಗೆ ದಂಡ ವಿಧಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಮಂಜುನಾಥ್ ಬೀದಿ ದೀಪ ನಿರ್ವಹಣೆ, ಗುತ್ತಿಗೆದಾರರು. | ವಾರ್ಡ್‌ನಲ್ಲಿ ಹಲವಾರು ಕಡೆ ಚಾಲ್ತಿಯಿರುವ ಬೀದಿ ದೀಪಗಳ ವಿದ್ಯುತ್ ತಂತಿಯನ್ನು ಹಲವಾರು ಕಡೆ ಕಡಿತಗೊಳಿಸಿರುತ್ತಾರೆ, ಇದರಿಂದ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರು ಸರಿಯಾಗಿ ಬೀದಿ ದೀಪಗಳನ್ನು ನಿರ್ವಹಿಸಲು ಸಧ್ಯವಾಗುತ್ತಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರು ವಾರ್ಡ-67 | ವಾರ್ಡ್‌ನ ಬೀದಿ ದೀಪ ನಿರ್ವಹಣೆ, ಗುತ್ತಿಗೆದಾರರ ದೂರಿಗೆ ಸಂಭಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಮಹಾಲಕ್ಷ್ಮೀಲೇಔಟ್ ಪೋಲೀಸ್ ಠಾಣೆಯವರಿಗೆ ಬೀದಿ ದೀಪಗಳ ವಿದ್ಯುತ್ ತಂತಿಯನ್ನು ಕಡಿತಗೊಳಿಸುತ್ತಿರುವ ವಿರುದ್ಧ ಕ್ರಮತೆಗೆದುಕೊಳ್ಳಬೇಕು ಹಾಗು ಸದರಿ ಬೀದಿ ದೀಪಗಳ ವಿದ್ಯುತ್ ತಂತಿಯನ್ನು ಕಡಿತಗೊಳಿಸುತ್ತಿರುವವರು ಸಿ.ಸಿ ಕ್ಯಾಮೇರದಲ್ಲಿ ಸೆರೆಯಾಗಿರುವುದು ಕಂಡುಬಂದಿರುತ್ತದೆ, ಆದ್ದರಿಂದ ಪೋಲೀಸ್ ಠಾಣೆಗೆ ದೂರು ನೀಡಲು ಬೀದಿ ದೀಪ ನಿರ್ವಹಣೆ, ಗುತ್ತಿಗೆದಾರರಿಗೆ ತಿಳಿಸಿದರು. |
| ಶ್ರೀ. ಕೇಶವಮೂರ್ತಿ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಹಾಯಕ ಅಭಿಯಂತರರು ರಸ್ತೆ ಗುಂಡಿ ಬಿದ್ದಲ್ಲಿ 3 ದಿನಗಳೊಳಗೆ ರಸ್ತೆ ಗುಂಡಿಯನ್ನು ಮುಚ್ಚಿ ಕ್ರಮವಹಿಸಲು ಸಭೆಯಲ್ಲಿ ಸೂಚಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರು ವಾರ್ಡ-67 | ವಾರ್ಡ್‌ನ ನೋಡೆಲ್ ಅಧಿಕಾರಿಗಳು ಸೂಚಿಸಿರುವಂತೆ ರಸ್ತೆ ಗುಂಡಿ ಬಿದ್ದಲ್ಲಿ ಆದಷ್ಟು ಬೇಗ ರಸ್ತೆ ಗುಂಡಿಯನ್ನು ಮುಚ್ಚಲಾಗುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ. ಶ್ರೀನಿವಾಸ್ ಗೌಡ ಗುತ್ತಿಗೆದಾರರು. | ವಾರ್ಡನ ಘ.ತ್ಯಾ.ನಿ ಸರಭರಾಜುದಾರರಿಗೆ ಇಲಾಖೆ ವತಿಯಿಂದ ಕೋವಿಡ್-19 (ಸ್ಯಾನಿಟೈಸೇಷನ್ ಹಾಗು ಸೀಲ್‌ಡೌನ್) ಬಿಲ್ ಪಾವತಿಮಾಡಿರುವುದಿಲ್ಲ. ಇದರಿಂದ ಗುತ್ತಿಗೆದಾರರಿಗೆ ಬಹಳ ಸಮಸ್ಯೆ ಉಂಟಾಗುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು ಮತ್ತು ವಾರ್ಡ್‌ನ ಎಲ್ಲಾ ವಾರ್ಡ್ ಸಮಿತಿ ಸದಸ್ಯರ ಸಮ್ಮುಖದಲ್ಲಿ ಗುತ್ತಿಗೆದಾರಿಗೆ ಬಿಲ್ಲ್ ಪಾವತಿ ಮಾಡಲು ಸಭೆಯಲ್ಲಿ ಕೋರಿದರು. |

ವಾರ್ಡ್ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ



ಪು.ತಿ.ನೋ.

3/11/22

Scanned by CamScanner

ಗಳನ್ನು ತಪ್ಪದೇ ವಾರ್ಡ್ ಕಮಿಟಿ ವಾರ್ಡ್-67 ವಾಟ್ಸ್ ಆಪ್ ಗ್ರೂಪ್ ನಲ್ಲಿ ಮತ್ತು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ...ಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ...ಗಮಿಸಿರುವ ಎಲ್ಲರಿಗೂ ವಂದಿಸಿದರು.

**ಪ್ರತಿಯನ್ನು**

1. ಮಾನ್ಯ ವಲಯ ಉಪಆಯುಕ್ತರು (ಆಡಳಿತ), ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

05/11/22

**ಕಾರ್ಯದರ್ಶಿ ಹಾಗೂ**
**ಸಹಾಯಕ ಅಭಿಯಂತರರು, ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

05/11/22

**ಅಧ್ಯಕ್ಷರು ಹಾಗೂ**
**ನೋಡಲ್ ಅಧಿಕಾರಿಗಳು ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

Scanned by CamScanner